# ಮಂಗಳೂರು ವಿಶ್ವವಿದ್ಯಾನಿಲಯ

**ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ**
**ಮತ್ತು ನೌಕರರ ಕ್ಷೇಮಾಭಿವೃದ್ಧಿಗಾಗಿ ಲಭ್ಯವಿರುವ ಸೌಲಭ್ಯಗಳ ಹಾಗೂ ಕಾರ್ಯಕ್ರಮಗಳ ವಿವರ.**

1. **ಸಂಶೋಧನಾ ಶಿಷ್ಯವೇತನ (ಪಿಹೆಚ್.ಡಿ.)**

ಪಿಹೆಚ್.ಡಿ ಸಂಶೋಧನೆ ಮಾಡುತ್ತಿರುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಹಾಗೂ ವಾರ್ಷಿಕ ಸಾದಿಲ್ವಾರು ವೆಚ್ಚವನ್ನು ನೀಡಲಾಗುತ್ತದೆ. ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ವಿವರ | ಪ್ರಸ್ತುತ ನೀಡುತ್ತಿರುವ ದರ ರೂ. | ಪರಿಷ್ಕೃತ ದರ ರೂ. |
|---|---|---|---|
| 1. | 3+1+1 ವರ್ಷಗಳ ಪಿಹೆಚ್.ಡಿ ವ್ಯಾಸಂಗದ ಶಿಷ್ಯವೇತನ | 12,000-00 | ಅ) ಕಿರಿಯ ಸಂಶೋಧನಾ ಮಾಸಿಕ ಶಿಷ್ಯವೇತನ (ಮೊದಲ ಎರಡು ವರ್ಷ) 15,000/-<br>ಆ) ಹಿರಿಯ ಸಂಶೋಧನಾ ಮಾಸಿಕ ಶಿಷ್ಯವೇತನ (ಎರಡು ವರ್ಷದ ನಂತರ) 17,000/- |
| 2. | ವಾರ್ಷಿಕ ಸಾದಿಲ್ವಾರು ವೆಚ್ಚ | 9,000-00 (ಕಲಾ ಮತ್ತು ವಾಣಿಜ್ಯ ನಿಕಾಯ)<br>12,000-00 (ವಿಜ್ಞಾನ ನಿಕಾಯ) | 12,000-00 (ಕಲಾ ಮತ್ತು ವಾಣಿಜ್ಯ ನಿಕಾಯ)<br>15,000-00 (ವಿಜ್ಞಾನ ನಿಕಾಯ) |

- Ph.D ಕೋರ್ಸುವರ್ಕಿಗೆ ಸೇರಿದ ದಿನಾಂಕದಿಂದ ಶಿಷ್ಯವೇತನ ನೀಡಲಾಗುತ್ತದೆ.

2. **Post-Doctoral ಅಧ್ಯಯನ**

Post-Doctoral ಅಧ್ಯಯನ ಕೈಗೊಳ್ಳಲಿರುವ ಪರಿಶಿಷ್ಟ ಜಾತಿ/ ಪಂಗಡದ ವಿದ್ಯಾರ್ಥಿಗಳಿಗೆ 12 Post-Doctoral Fellowship ನೀಡಲಾಗುವುದು. (SC-10-ST-2) ಇದರಲ್ಲಿ ಮಾಸಿಕ ರೂ.15,000/- ಶಿಷ್ಯವೇತನ ಹಾಗೂ ವಾರ್ಷಿಕ ಸಾದಿಲ್ವಾರು ರೂ. 20,000/- ನೀಡಲಾಗುವುದು.

3. **ಕ್ರೀಡಾ ವಿದ್ಯಾರ್ಥಿಗಳಿಗೆ ಧನಸಹಾಯ:**

ಬಿ.ಪಿ.ಇಡಿ ಮತ್ತು ಎಂ.ಪಿ.ಇಡಿ ವ್ಯಾಸಂಗ ಮಾಡುವ ಪರಿಶಿಷ್ಟ ಜಾತಿ/ ಪಂಗಡ ವಿದ್ಯಾರ್ಥಿಗಳಿಗೆ "ಸ್ಪೋರ್ಟ್ಸ್ ಕಿಟ್" ಖರೀದಿಸಲು ತಲಾ ರೂ.4,000/- ರಂತೆ ಧನಸಹಾಯ ನೀಡಲಾಗುತ್ತದೆ. ಮತ್ತು ವಿಶೇಷ ಘಟಕ ಯೋಜನೆ (SCP) ಮತ್ತು ಬುಡಕಟ್ಟು ಉಪಯೋಜನೆ (TSP)ಯಡಿ ಬಿಡುಗಡೆಯಾದ ಅನುದಾನದ ಲಭ್ಯತೆ ಮೇರೆಗೆ ಈ ಕೆಳಗಿನ ಮಾನದಂಡಗಳ ಪ್ರಕಾರ ವಿಶೇಷ ಸ್ಪೋರ್ಟ್ಸ್‌ಕಿಟ್ ಖರೀದಿಸಲು ಪರಿಶಿಷ್ಟ ಜಾತಿ/ ಪಂಗಡ ವಿದ್ಯಾರ್ಥಿಗಳಿಗೆ ಧನ ಸಹಾಯವನ್ನು ನೀಡಲಾಗುತ್ತಿದೆ.

i) Medalist in All India – Inter University Competitions/Medalist in National Championships (Organized by National Federation/ Associations) Rs.30000/-
ii) South zone/Inter University Medalist – Rs.20000/-
iii) Participation in All India and South zone Inter University Competitions/Representing Karnataka State in National Championships (Organized by National or State Federations/ Associations) - Rs. 10000/-

Note: Sports Kit will be given at only in one stage

4. **ಹೆಚ್ಚುವರಿ ಊಟದ ವೆಚ್ಚ ಭರಿಸುವುದು** :

ವಸತಿನಿಲಯಗಳಲ್ಲಿರುವ ರೂ. 2.50 ಲಕ್ಷ ಆದಾಯ ಮಿತಿಯೊಳಗಿರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೀಡಲಾಗುವ ನಿರ್ವಹಣಾ ಭತ್ಯೆ ಹಾಗೂ ಇ.ಬಿ.ಎಲ್.ಗಳಿಗೂ ಮೀರಿ ಹೆಚ್ಚುವರಿ ಬರುವ ಊಟದ ವೆಚ್ಚವನ್ನು ಭರಿಸಲಾಗುತ್ತದೆ.

5. **ಪ್ರೌಢ ಪ್ರಬಂಧಕ್ಕೆ ಧನಸಹಾಯ:**

ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಪ್ರೌಢ ಪ್ರಬಂಧವನ್ನು ರಚಿಸಲು ತಲಾ ರೂ. 5,000/- ರಂತೆ ಧನಸಹಾಯ ನೀಡಲಾಗುತ್ತದೆ.

6. **ಶುಲ್ಕ ವಿನಾಯಿತಿ** :
ವಿಶ್ವವಿದ್ಯಾನಿಲಯದ ವಿವಿಧ ಕೋಸುಗಳಿಗೆ ಪ್ರವೇಶಾತಿ ಪಡೆಯುವ ರೂ.2.50 ಲಕ್ಷ ಆದಾಯ ಮಿತಿಯೊಳಗಿರುವ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಸಂಬಂಧಿಸಿದ ಹಲವು ಶುಲ್ಕ ವಿನಾಯಿತಿಗಳನ್ನು ನೀಡಲಾಗುವುದು.
ವಿವಿಧ ಸಾತಕೋತ್ತರ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳು/ಮಾನ್ಯತೆ ಪಡೆದ ಸಂಶೋಧನಾ ಕೇಂದ್ರಗಳು/ಸಂಯೋಜಿತ ಶಿಕ್ಷಣ ಸಂಸ್ಥೆಗಳು ಇಲ್ಲಿ ಪಿಹೆಚ್.ಡಿ. ಕೋರ್ಸಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ನಿಗದಿಪಡಿಸುವ ವಿವಿಧ ಶುಲ್ಕಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ಶೇಕಡಾ 50ರಷ್ಟು ವಿನಾಯಿತಿ ನೀಡಲಾಗುವುದು.

7. **ಶೈಕ್ಷಣಿಕ ಅಧ್ಯಯನ ಪ್ರವಾಸಕ್ಕೆ ಧನ ಸಹಾಯ** :
ಸ್ನಾತಕೋತ್ತರ ವಿಭಾಗಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಯಾವುದೇ ಶೈಕ್ಷಣಿಕ ಪ್ರವಾಸಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕಾಗಿ ಬಂದಲ್ಲಿ ಅದಕ್ಕಾಗಿ ತಗಲುವ ಸಂಪೂರ್ಣ ವೆಚ್ಚವನ್ನು ನಿಯಮಾವಳಿ ಪ್ರಕಾರ ಮಂಜೂರು ಮಾಡಲಾಗುವುದು, ಹಾಗೂ ಕ್ಷೇತ್ರ ಕಾರ್ಯಗಳಿಗೆ ಪ್ರವಾಸದ ವೆಚ್ಚವನ್ನು ಸಂಪೂರ್ಣ ಭರಿಸಲಾಗುವುದು.

8. **ತರಬೇತಿ ಕಾರ್ಯಕ್ರಮಗಳು**:
ಆಂಗ್ಲ ಭಾಷಾ ನೈಪುಣ್ಯತೆಯನ್ನು ಬೆಳೆಸಲು ಹಾಗೂ ಯು.ಜಿ.ಸಿ./ಜೆ ಆರ್ ಎಫ್/ ಎಸ್.ಎಲ್.ಇ.ಟಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸಲು ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ತರಗತಿಗಳನ್ನು ನಡೆಸಲಾಗುತ್ತದೆ.

9. **ಮೀಸಲಾತಿ ಪಾಲನೆ** :
ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ/ಘಟಕ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಹಾಗೂ ವಸತಿನಿಲಯಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳ ಪ್ರವೇಶಾತಿಯಲ್ಲಿ ಮೀಸಲಾತಿ ನಿಯಮಗಳನ್ನು ಸರಿಯಾಗಿ ಪಾಲಿಸುವಂತೆ ನೋಡಿಕೊಳ್ಳುವುದು.

10. **ಬುಕ್ ಬ್ಯಾಂಕ್ ಸೌಲಭ್ಯ** :
ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳಿಗೆ ತೊಂದರೆಯಾಗದಂತೆ ಗ್ರಂಥಾಲಯಗಳಲ್ಲಿ ಪ್ರತ್ಯೇಕ ಬುಕ್ ಬ್ಯಾಂಕ್ ಸೌಲಭ್ಯ ಕಲ್ಪಿಸಲಾಗಿದೆ.

11. **ಕಂಪ್ಯೂಟರ್ ತರಬೇತಿ** :
ಘಟಕ ಹಾಗೂ ಸಂಯೋಜಿತ ಕಾಲೇಜುಗಳ ಮತ್ತು ಸ್ನಾತಕೋತ್ತರ ವಿಭಾಗಗಳ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಜೊತೆಗೆ ಕಂಪ್ಯೂಟರ್ ತರಬೇತಿ ಪಡೆಯ ಬಯಸುವವರಿಗೆ ತರಬೇತಿ ನೀಡಲಾಗುತ್ತದೆ.

12. **ವೃತ್ತಿ ಮಾರ್ಗದರ್ಶನ** :
ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಉದ್ಯೋಗ ಮಾಹಿತಿಯನ್ನು ಒದಗಿಸುವುದಕ್ಕೋಸ್ಕರ ವಿವಿಧ ಇಲಾಖೆಗಳ ಪರೀಕ್ಷೆಗಳಿಗೆ ಸಂಬಂಧಿಸಿದ ಗ್ರಂಥಗಳನ್ನು ಖರೀದಿಸಲು ವಿಶ್ವವಿದ್ಯಾನಿಲಯದಲ್ಲಿರುವ ವೃತ್ತಿ ಸಮಾಚಾರ ಮತ್ತು ಮಾರ್ಗದರ್ಶನ ಕೇಂದ್ರಕ್ಕೆ ರೂ.10,000-00 ಗಳನ್ನು ನೀಡಲಾಗುತ್ತದೆ.

13. **ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಚಿನ್ನದ ಪದಕ** :
ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ (ಕನಿಷ್ಠ 55 ಶೇಕಡಾ) ವಿದ್ಯಾರ್ಥಿಗಳಿಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೆಸರಲ್ಲಿ ಚಿನ್ನದ ಪದಕವನ್ನು ನೀಡಲಾಗುತ್ತದೆ. ಈ ಚಿನ್ನದ ಪದಕವನ್ನು ಕಲಾ, ವಾಣಿಜ್ಯ, ವಿಜ್ಞಾನ, ಶಿಕ್ಷಣ ಹಾಗೂ ಕಾನೂನು ನಿಕಾಯಗಳ ವಿದ್ಯಾರ್ಥಿಗಳಿಗೆ ನೀಡಲಾಗುವುದು.

14. **ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪಡೆಯುವವರಿಗೆ ಪರೀಕ್ಷಾ ಅಂಕಗಳಲ್ಲಿ ರಿಯಾಯಿತಿ**:
ವಿವಿಧ ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಅಂಕಗಳಲ್ಲಿ ಶೇಕಡಾ 10 ಗುಣಗಳ ರಿಯಾಯಿತಿ ನೀಡಲಾಗಿದೆ. ಅಂದರೆ ಪದವಿ ಪರೀಕ್ಷೆಗಳಲ್ಲಿ ಶೇಕಡಾ 40 ಗುಣಗಳನ್ನು ಪಡೆದವರು ಸಹ ಸ್ನಾತಕೋತ್ತರ ತರಗತಿಗಳಿಗೆ ನಿಯಮಾನುಸಾರ ಪ್ರವೇಶ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

15. **ಪರಿಶಿಷ್ಟ ಜಾತಿ/ಪಂಗಡ ನೌಕರರಿಗೆ ಇರುವ ಸೌಲಭ್ಯಗಳು**:
ವಿಶ್ವವಿದ್ಯಾನಿಲಯದಲ್ಲಿರುವ ಪರಿಶಿಷ್ಟ ಜಾತಿ/ಪಂಗಡ ಶಿಕ್ಷಕರಿಗೆ ಹಾಗೂ ಶಿಕ್ಷಕೇತರರಿಗೆ ಸಂಶೋಧನಾ ವೆಚ್ಚ ಭರಿಸಲು ರೂ.5000-00 ವನ್ನು ಬಡ್ಡಿ ರಹಿತ ಸಾಲದ ಅವಕಾಶ ಕಲ್ಪಿಸಲಾಗಿದೆ.

16. **ಸಂಶೋಧನೆ ಕೈಗೊಳ್ಳಲು ಸೌಲಭ್ಯ:**
ವಿಶ್ವವಿದ್ಯಾನಿಲಯದ ಮನ್ನಣೆ ಪಡೆದ ಪ್ರತಿಯೊಬ್ಬ ಸಂಶೋಧಕ ಮಾರ್ಗದರ್ಶಿ ಶಿಕ್ಷಕರು ಏಕಕಾಲಕ್ಕೆ ೮ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲು ಅವಕಾಶವಿದೆ. ಇದರೊಂದಿಗೆ ೮ ಜನ ಸಂಶೋಧನಾ ವಿದ್ಯಾರ್ಥಿಗಳ ಜೊತೆಗೆ ಹೆಚ್ಚುವರಿಯಾಗಿ ಒಬ್ಬರು ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗೆ ಮಾರ್ಗದರ್ಶನ ಮಾಡಲು ಅವಕಾಶ ಕಲ್ಪಿಸಲಾಗಿದೆ.

17. **ನೇಮಕಾತಿಯಲ್ಲಿ ಘಟಕದ ಪಾತ್ರ:**
ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿ ಶಿಕ್ಷಕ– ಶಿಕ್ಷಕೇತರ ನೇಮಕಾತಿ ಮಾಡುವಾಗ ಹಾಗೂ ಭಡ್ತಿ ನೀಡುವಾಗ ಜಾರಿಯಲ್ಲಿದ್ದ ಮತ್ತು ಕಾಲಕಾಲಕ್ಕೆ ಬದಲಾಗುವ ಸರಕಾರದ ಆದೇಶಗಳನ್ನು ವಿಶ್ವವಿದ್ಯಾನಿಲಯ ಪಾಲಿಸುವಲ್ಲಿ ಘಟಕವು ಸಕ್ರೀಯ ಪಾತ್ರ ವಹಿಸುತ್ತದೆ.

18. **ಪರೀಕ್ಷಾ ಕಾರ್ಯಕ್ಕೆ ನೇಮಕಾತಿ:**
ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಯ ಕೆಲಸ ಕಾರ್ಯಗಳಿಗೆ ಐದು ವರ್ಷ ಜ್ಯೇಷ್ಠತೆಯಾಧಿಯ ಮೇಲೆ ಪರಿಶಿಷ್ಟ ಜಾತಿ/ಪಂಗಡ ಶಿಕ್ಷಕರನ್ನು ಪ್ರಾತಿನಿಧ್ಯ ಕೊಟ್ಟು ಪರೀಕ್ಷಾ ಕಾರ್ಯಕ್ಕೆ ನೇಮಕಾತಿ ಮಾಡಲಾಗುತ್ತದೆ.

19. **ನೌಕರರ ಸೇವಾ ಜ್ಯೇಷ್ಠತೆಯಲ್ಲಿ ರಿಯಾಯಿತಿ:**
ವಿಶ್ವವಿದ್ಯಾನಿಲಯವು ವಸತಿ ಗೃಹ ಹಂಚುವಾಗ/ಬದಲಾಯಿಸುವಾಗ ಹಾಗೂ ವಿವಿಧ ಸಾಲಗಳನ್ನು ಮಂಜೂರು ಮಾಡುವಾಗ ಪರಿಶಿಷ್ಟ ಜಾತಿ/ಪಂಗಡ ನೌಕರರ ಸೇವಾ ಜೇಷ್ಠತೆಯಲ್ಲಿ ರಿಯಾಯಿತಿ ತೋರಿಸಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

20. **ವಿದ್ಯಾರ್ಥಿಗಳಿಗೆ ಕೊಠಡಿ ಬಾಡಿಗೆ ಧನ ಸಹಾಯ:**
ಪ್ರತಿ ವರ್ಷವೂ ಸ್ಥಳೀಯರಲ್ಲದ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ವಾಸವಿಲ್ಲದ ಹಾಗೂ ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು/ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳ ಕೋರಿಕೆ ಮೇರೆಗೆ ಕೊಠಡಿ ಬಾಡಿಗೆ ಧನ ಸಹಾಯವಾಗಿ ತಿಂಗಳಿಗೆ ತಲಾ ರೂ.75–00ರಂತೆ 10 ತಿಂಗಳ ಅವಧಿಗೆ ಧನಸಹಾಯವನ್ನು ನೀಡಲಾಗುತ್ತದೆ.

21. **ಕ್ರೀಡೆ, ಸಮ್ಮೇಳನ, ವಿಚಾರ ಸಂಕಿರಣಗಳಿಗೆ ಭಾಗವಹಿಸುವ ವಿದ್ಯಾರ್ಥಿಗಳಿಗೆ ಧನಸಹಾಯ:**
ಪ್ರತಿ ವರ್ಷವೂ ವಿಶ್ವವಿದ್ಯಾನಿಲಯದ ನೇರ ಆಡಳಿತಕ್ಕೊಳಪಟ್ಟ ಕಾಲೇಜು/ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯ ಮಟ್ಟದಲ್ಲಿನ ಕ್ರೀಡೆ (ವಿ.ವಿ.ಮಟ್ಟ.)ಪಠ್ಯೇತರ, ಎನ್.ಸಿ.ಸಿ., ಎನ್.ಎಸ್.ಎಸ್., ಸಮ್ಮೇಳನ ವಿಚಾರ ಸಂಕಿರಣ ಮುಂತಾದ ಚಟುವಟಿಕೆಗಳಲ್ಲಿ ರಾಷ್ಟ್ರಮಟ್ಟದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ತಲಾ ರೂ. 500/–ರಂತೆ ಧನಸಹಾಯವನ್ನು ನೀಡಲಾಗುತ್ತದೆ.

22. **ಪ್ರತ್ಯೇಕ ಮಂಡಳಿಯ ರಚನೆ:**
ವಿಶ್ವವಿದ್ಯಾನಿಲಯ ಘಟಕ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ವಿದ್ಯಾರ್ಥಿಗಳಿಗೆ ಪ್ರವೇಶ ಸೌಲಭ್ಯಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತದೆ. ಹಾಗೂ ಸೌಲಭ್ಯ ನೀಡಿರುವುದರ ಬಗ್ಗೆ ಪರಿಶೀಲಿಸಲು ಪ್ರತ್ಯೇಕ ಮಂಡಳಿಯನ್ನು ರಚಿಸಲಾಗಿದೆ.

23. **ಸಂಶೋಧನಾ ವಿದ್ಯಾರ್ಥಿಗಳಿಗೆ ಧನಸಹಾಯ:**
ರಾಷ್ಟ್ರೀಯ/ಅಂತರಾಷ್ಟ್ರೀಯ ವಿಚಾರ ಸಂಕಿರಣ/ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಲು ಪರಿಶಿಷ್ಟ ಜಾತಿ/ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಧನಸಹಾಯ ನೀಡಲಾಗುತ್ತದೆ. ಇದನ್ನು ದೇಶದ ಒಳಗೆ ವರ್ಷಕ್ಕೊಂದು ಬಾರಿ ಹಾಗೂ ವಿದೇಶಗಳಿಗೆ ಮೂರು ವರ್ಷಗಳಿಗೆ ಒಂದು ಬಾರಿ ನೀಡಲಾಗುತ್ತದೆ.

24. **ವಿಶೇಷ Sports Kit:**
ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ದಕ್ಷಿಣವಲಯ ಮತ್ತು ಅಖಿಲ ಭಾರತ ಮಟ್ಟಗಳಲ್ಲಿ ಪ್ರಶಸ್ತಿ ವಿಜೇತ ಪರಿಶಿಷ್ಟ ಜಾತಿ/ಪಂಗಡದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ/ ವಿಶೇಷ Sports Kit ನೀಡಲಾಗುತ್ತದೆ.

25. **FIP Fellowship:**
ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಂದ ಪಿಹೆಚ್.ಡಿಗಾಗಿ ನೋಂದಾವಣಿ ಮಾಡುವ ಪರಿಶಿಷ್ಟ ಜಾತಿ/ಪಂಗಡದ ಬೋಧಕರಿಗೆ FIP Fellowship ಗಳನ್ನು ನೀಡಲಾಗುವುದು.

ಸಹಿ/–
ಕುಲಸಚಿವರು